All India Radio: Bangalore
National Bulletin In Kannada
22.03.2026 7.35 am

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<>><><*><><<>

ಮುಖ್ಯಾಂಶಗಳು

೧. ಪಶ್ಚಿಮ ಏಷ್ಯಾದ ಉದ್ವಿಗ್ನತೆಯ ನಡುವೆಯೂ ದೇಶದಲ್ಲಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಕೊರತೆ ಇಲ್ಲ - ಕೇಂದ್ರ ಸರ್ಕಾರ

೨. ಇಂದು 'ವಿಶ್ವ ಜಲದಿನ'; ಇದರ ಭಾಗವಾಗಿ ನಾಳೆ ನವದೆಹಲಿಯಲ್ಲಿ ಕೇಂದ್ರ ಜಲ ಶಕ್ತಿ ಸಚಿವಾಲಯದಿಂದ ವಿಶೇಷ ಸಮಾವೇಶ

೩. ಎಮ್‌ಎಸ್‌ಎಮ್‌ಇಗಳ ತಯಾರಕರು ಮತ್ತು ರಫ್ತುದಾರರನ್ನು ಬೆಂಬಲಿಸಲು ಮ್ಯೂಚುಯಲ್ ಕ್ರೆಡಿಟ್ ಗ್ಯಾರಂಟಿ ಯೋಜನೆ ಮಾರ್ಪಡಿಸಿದ ಕೇಂದ್ರ ಸರ್ಕಾರ

೪. ಇಂಡಿಯನ್ ಓಪನ್ - ಪಿಎಸ್‌ಎ ಸ್ಕ್ವಾಷ್ ಟೂರ್ ಕಾಪರ್ ಈವೆಂಟ್; ಮಹಿಳಾ ಫೈನಲ್‌ನಲ್ಲಿಂದು ಭಾರತದ ಅನಾಹತ್ ಸಿಂಗ್ ಸ್ಪರ್ಧೆ

೫. ಐರ್ಲೆಂಡ್‌ನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಗೆ ಭಾರತೀಯ ಪುರುಷರ ತಂಡದ ವೇಳಾಪಟ್ಟಿ ಪ್ರಕಟಿಸಿದ- ಬಿಸಿಸಿಐ

<>><><*><><<>

ಪಶ್ಚಿಮ ಏಷ್ಯಾದ ಉದ್ವಿಗ್ನತೆಯ ನಡುವೆಯೂ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದ್ದು, ನಾಗರಿಕರು ಭಯಭೀತರಾಗಬಾರದು ಎಂದು ಮನವಿ ಮಾಡಿದೆ. ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನು ರಿಫೈನರಿಗಳಿಂದ ಹೆಚ್ಚಿಸಲಾಗಿದೆ. ಸಂಗ್ರಹಣೆ ಮತ್ತು ಕಾಳಸಂತೆ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಏತನ್ಮಧ್ಯೆ, ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ, ಹಡಗು ಚಲನವಲನಗಳು, ಬಂದರು ಕಾರ್ಯಾಚರಣೆಗಳು, ಭಾರತೀಯ ನಾವಿಕರ ಸುರಕ್ಷತೆ ಮತ್ತು ಕಡಲ ವ್ಯಾಪಾರದ ನಿರಂತರತೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಸ್ಪಷ್ಟಪಡಿಸಿದೆ. ಎಂಟಿ ಸಫೀಸಾ ವಿಷ್ಣುವಿ ಹಡಗಿನ ೧೫ ಭಾರತೀಯ ಸಿಬ್ಬಂದಿ ಇರಾಕ್‌ನಿಂದ ಸುರಕ್ಷಿತವಾಗಿ ಭಾರತಕ್ಕೆ ಮರಳಿದ್ದಾರೆ. ೫೦೦ ಕ್ಕೂ ಹೆಚ್ಚು ಭಾರತೀಯ ನಾವಿಕರನ್ನು ಈಗಾಗಲೇ ಸುರಕ್ಷಿತವಾಗಿ ಮರಳಿ ಕರೆತರಲಾಗಿದೆ. ಭಾರತೀಯ ಧ್ವಜ ಹೊಂದಿರುವ ಹಡಗುಗಳಿಗೆ ಸಂಬಂಧಿಸಿದಂತೆ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ ಎಂದು ದೃಢಪಡಿಸಿದೆ.

ಮಧ್ಯಪ್ರಾಚ್ಯ ಪ್ರದೇಶಗಳಿಂದ ಫೆಬ್ರವರಿ ಅಂತ್ಯದಿಂದ ಈವರೆಗೆ ಸುಮಾರು ೩ ಲಕ್ಷದ ೩೦ ಸಾವಿರ ಭಾರತೀಯರು ಸ್ವದೇಶಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

<><><*><><>

ಇಂದು 'ವಿಶ್ವ ಜಲದಿನ'. ಜಾಗತಿಕವಾಗಿ ಆಚರಿಸಲ್ಪಡುವ ಜಲ ದಿನದ ಭಾಗವಾಗಿ ನಾಳೆ ನವದೆಹಲಿಯಲ್ಲಿ ಜಲ ಶಕ್ತಿ ಸಚಿವಾಲಯವು, ವಿಶ್ವ ಜಲ ದಿನ ಸಮಾವೇಶ ೨೦೨೬ ಅನ್ನು ಆಯೋಜಿಸಿದೆ. ಕೇಂದ್ರ ಜಲ ಶಕ್ತಿ ಖಾತೆ ಸಚಿವ ಸಿ.ಆರ್.ಪಾಟೀಲ್, ಸರ್ಕಾರ ಮತ್ತು ಕೈಗಾರಿಕಾ ಕ್ಷೇತ್ರದ ಹಿರಿಯ ಪ್ರತಿನಿಧಿಗಳೊಂದಿಗೆ ಸಮಾವೇಶದ ಉದ್ಘಾಟನಾ ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. 'ಇಂಡಸ್ಟ್ರಿ ಆಫ್ ವಾಟರ್' ಎಂಬ ವಿಷಯಾಧಾರಿತ ಈ ಸಮಾವೇಶವು, ಶಾಶ್ವತ ಜಲ ನಿರ್ವಹಣೆ ಕುರಿತ ಸಂವಾದ, ಮತ್ತು ಸಹಕಾರಕ್ಕಾಗಿ ರಾಷ್ಟ್ರೀಯ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ ಎಂದು ಸಚಿವಾಲಯ ತಿಳಿಸಿದೆ. ಈ ಸಮ್ಮೇಳನವು, ನೀತಿನಿರ್ಧಾರಕರು, ಕೈಗಾರಿಕಾ ಮುಖಂಡರು, ನವೋದ್ಯಮಗಳು, ಎಂಎಸ್ಎಂಇಗಳು ಮತ್ತು ಯುವ ಆವಿಷ್ಕಾರಕರನ್ನು ಒಟ್ಟುಗೂಡಿಸಿ, ತಂತ್ರಜ್ಞಾನ ಆಧಾರಿತ, ವಿಸ್ತರಿಸಬಹುದಾದ ಪರಿಹಾರಗಳನ್ನು ರೂಪಿಸಲು ಸಹಕರಿಸಲಿದೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಿಂದ ೭೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

<><><*><><>

೨೦೨೫-೨೬ರ ಬಜೆಟ್‌ಗೆ ಅನುಗುಣವಾಗಿ ಕೇಂದ್ರ ಸರ್ಕಾರವು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ-ಎಮ್‌ಎಸ್‌ಎಮ್‌ಇಗಳ ತಯಾರಕರು ಮತ್ತು ರಫ್ತುದಾರರನ್ನು ಬೆಂಬಲಿಸಲು ಮ್ಯೂಚುಯಲ್ ಕ್ರೆಡಿಟ್ ಗ್ಯಾರಂಟಿ ಯೋಜನೆ-ಎಮ್‌ಸಿಜಿಎಸ್ ಅನ್ನು ಮಾರ್ಪಡಿಸಿದೆ. ಈ ಯೋಜನೆಯು ಎಮ್‌ಸಿಜಿಎಸ್- ಎಮ್‌ಎಸ್‌ಎಮ್‌ಇ ಅಡಿಯಲ್ಲಿ ಅರ್ಹ ಎಮ್‌ಎಸ್‌ಎಮ್‌ಇ ಗಳಿಗೆ ಉಪಕರಣಗಳು ಮತ್ತು ಯಂತ್ರೋಪಕರಣಗಳ ಖರೀದಿಗೆ ಮಂಜೂರು ಮಾಡಲಾದ ೧೦೦ ಕೋಟಿ ರೂಪಾಯಿಗಳವರೆಗಿನ ಸಾಲ ಸೌಲಭ್ಯಕ್ಕಾಗಿ ಸದಸ್ಯ ಸಾಲ ನೀಡುವ ಸಂಸ್ಥೆಗಳಿಗೆ ನ್ಯಾಷನಲ್ ಕ್ರೆಡಿಟ್ ಗ್ಯಾರಂಟಿ ಟ್ರಸ್ಟಿ ಕಂಪನಿ ಲಿಮಿಟೆಡ್-ಎನ್‌ಸಿಜಿಟಿಸಿ ಯಿಂದ ೬೦ ಪ್ರತಿಶತ ಗ್ಯಾರಂಟಿ ಕವರೇಜ್ ಅನ್ನು ಒದಗಿಸುತ್ತದೆ.

<><><*><><>

ಮೇರಾ ಯುವ -ಭಾರತ್ ನಾಳೆ ಶಹೀದ್ ದಿವಸ್ ಅಂಗವಾಗಿ ದೇಶಾದ್ಯಂತ ಪಾದಯಾತ್ರೆಯನ್ನು ಆಯೋಜಿಸಲಿದೆ. 'ನನ್ನ ಭಾರತ, ನನ್ನ ಜವಾಬ್ದಾರಿ' ಎಂಬ ಧ್ಯೇಯದೊಂದಿಗೆ ಈ ಉಪಕ್ರಮವನ್ನು ನಡೆಸಲಾಗುವುದು. ಭಾರತದ ಯುವ ಸ್ವಾತಂತ್ರ್ಯ ಹೋರಾಟಗಾರರಾದ ಶಹೀದ್ ಭಗತ್ ಸಿಂಗ್, ಶಹೀದ್ ಶಿವರಾಮ್ ರಾಜಗುರು ಮತ್ತು ಶಹೀದ್ ಸುಖದೇವ್ ಥಾಪರ್ ಅವರ ತ್ಯಾಗಕ್ಕೆ ಈ ಪಾದಯಾತ್ರೆಯ ಮೂಲಕ ಗೌರವನಮನ ಸಲ್ಲಿಸಲಾಗುವುದು. ಯುವಜನರ ಶಕ್ತಿ, ಆದರ್ಶವಾದ ಮತ್ತು ಆಕಾಂಕ್ಷೆಗಳನ್ನು ಜವಾಬ್ದಾರಿಯುತ ಪೌರತ್ವದ ಕಡೆಗೆ ಗಮನ ಹರಿಸುವುದು ಈ ಉಪಕ್ರಮದ ಗುರಿಯಾಗಿದೆ ಎಂದು ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ತಿಳಿಸಿದೆ. ದೇಶದ ಎಲ್ಲಾ ೭೬೩ ಜಿಲ್ಲೆಗಳಲ್ಲಿ ಪಾದಯಾತ್ರೆಗಳನ್ನು ಆಯೋಜಿಸಲಾಗುವುದು, ಹರಿಯಾಣದ ಫರಿದಾಬಾದ್‌ನಲ್ಲಿ ೧೦ ಸಾವಿರಕ್ಕೂ ಹೆಚ್ಚು ಯುವಕರು ಭಾಗವಹಿಸುವ ಪ್ರಮುಖ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.

ಯುವಜನ ವ್ಯವಹಾರ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವರಾದ ರಕ್ಷಾ ಖಾಡ್ಸೆ ಮತ್ತು ಹರಿಯಾಣದ ಕ್ರೀಡಾ ಸಚಿವ ಗೌರವ್ ಗೌತಮ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

<>><><*><><<>

ಕೇರಳಂನಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗೆ ಬಿಜೆಪಿ ೧೧ ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಕೋವಲಂ ವಿಧಾನಸಭಾ ಸ್ಥಾನದಿಂದ ಟಿ.ಎನ್.ಸುರೇಶ್, ಪೀರುಮಡೆ ಸ್ಥಾನದಿಂದ ವಿ.ರತೀಶ್, ಮಾವೆಲಿಕ್ಕರದಿಂದ ಅಜಿಮೋನ್, ಅರುವಿಕ್ಕರ ಸ್ಥಾನದಿಂದ ವಿವೇಕ್ ಗೋಪನ್ ಮತ್ತು ಚವಾರ ಸ್ಥಾನದಿಂದ ಕೆ.ಆರ್.ರಾಜೇಶ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ. ಪುದುಚೇರಿ ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷವು ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಹಂಚಿಕೆಯಾದ ೧೦ ಸ್ಥಾನಗಳಲ್ಲಿ ೯ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಹೆಸರಿಸಿದೆ. ಈ ಪಟ್ಟಿಯಲ್ಲಿ ಮನ್ನಾಡಿಪೇಟೆಯಿಂದ ಗೃಹ ಸಚಿವ ನಮಶಿವಾಯಂ, ರಾಜಭವನದಿಂದ ರಾಜ್ಯಾಧ್ಯಕ್ಷ ವಿ.ಪಿ.ರಾಮಲಿಂಗಂ, ಮುದಲಿಯಾರ್ಪೇಟೆಯಿಂದ ಸಚಿವ ಜಾನ್ ಕುಮಾರ್ ಮತ್ತು ಮನವೇಲಿಯಿಂದ ವಿಧಾನಸಭಾ ಸ್ಪೀಕರ್ ಆರ್.ಸೆಲ್ವಂ ಸೇರಿದಂತೆ ಇತರರು ಸೇರಿದ್ದಾರೆ. ಈ ನಡುವೆ ಅಸ್ಸಾಂ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯು ಇಬ್ಬರು ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ದಲ್ಗಾಂವ್ ವಿಧಾನಸಭಾ ಕ್ಷೇತ್ರದಿಂದ ಸುಶ್ರೀ ಕೃಷ್ಣ ಸಹಾ ಮತ್ತು ಸಿಸ್ಸಿಬರ್ಗಾಂವ್ ಕ್ಷೇತ್ರದಿಂದ ಜಿಬನ್ ಗೊಗೊಯ್ ಸ್ಪರ್ಧಿಸಲಿದ್ದಾರೆ.

<>><><*><><<>

ಟೆಹ್ರಾನ್ ೪೮ ಗಂಟೆಗಳ ಒಳಗೆ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯದಿದ್ದರೆ ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಟ್ರುತ್‌ನಲ್ಲಿ ಟ್ರಂಪ್ ಅಂತಿಮ ಎಚ್ಚರಿಕೆ ನೀಡಿದ್ದು, ಇರಾನ್‌ಗೆ ಪ್ರಮುಖ ಜಲಮಾರ್ಗವನ್ನು ತೆರೆಯಲು ನಿಖರವಾಗಿ ೪೮ ಗಂಟೆಗಳ ಕಾಲಾವಕಾಶ ನೀಡಿದ್ದಾರೆ. ಇಲ್ಲವಾದರೆ ಹೊಸ ರೀತಿಯ ದಾಳಿಯನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

<>><><*><><<>

ಮುಂಬೈನಲ್ಲಿ ನಿನ್ನೆ ರಾತ್ರಿ ನಡೆದ ಇಂಡಿಯನ್ ಓಪನ್ - ಪಿಎಸ್‌ಎ ಸ್ಕ್ವಾಷ್ ಟೂರ್ ಕಾಪರ್ ಈವೆಂಟ್‌ನ ಮಹಿಳಾ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕಿತ ಮತ್ತು ಹಾಲಿ ಚಾಂಪಿಯನ್ ಅನಾಹತ್ ಸಿಂಗ್, ತನ್ವಿ ಖನ್ನಾ ಅವರನ್ನು ೩-೧ ಅಂತರದಿಂದ ಸೋಲಿಸಿ, ಫೈನಲ್ ಪ್ರವೇಶಿಸಿದ್ದಾರೆ. ಇಂದು ಅವರು ಎರಡನೇ ಶ್ರೇಯಾಂಕಿತ ಈಜಿಪ್ಟ್ ಆಟಗಾರ್ತಿ ಹನಾ ಮೊಟಾಜ್ ಅವರನ್ನು ಎದುರಿಸಲಿದ್ದಾರೆ. ಏತನ್ಮಧ್ಯೆ, ಪುರುಷರ ಸಿಂಗಲ್ಸ್‌ನಲ್ಲಿ, ಭಾರತದ ವೀರ್ ಚೋತ್ರಾನಿ ಮಲೇಷ್ಯಾದ ಸಂಜಯ್ ಜೀವಾ ಅವರನ್ನು ೩-೧ ಅಂತರದಿಂದ ಸೋಲಿಸಿ ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ, ವೀರ್ ಚೋತ್ರಾನಿ ಇಂದು ನಡೆಯುವ ಫೈನಲ್ ಹಣಾಹಣಿಯಲ್ಲಿ ಅಭಯ್ ಸಿಂಗ್ ಅವರನ್ನು ಎದುರಿಸಲಿದ್ದಾರೆ.

<>><><*><><<>

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ, ಈ ವರ್ಷದ ಜೂನ್‌ನಲ್ಲಿ ಐರ್ಲೆಂಡ್‌ನಲ್ಲಿ ನಡೆಯಲಿರುವ ಎರಡು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಗಾಗಿ ಹಿರಿಯ ಭಾರತೀಯ ಪುರುಷರ ತಂಡದ ವೇಳಾಪಟ್ಟಿ ಪ್ರಕಟಿಸಿದೆ. ಭಾರತದ ತಂಡವು, ಜೂನ್ ೨೬ ರಂದು ಬೆಲ್‌ಫಾಸ್ಟ್‌ನಲ್ಲಿ ಮೊದಲ ಪಂದ್ಯವನ್ನು ಆಡಲಿದೆ. ನಂತರ ಜೂನ್ ೨೮ ರಂದು ಅದೇ ಸ್ಥಳದಲ್ಲಿ ಎರಡನೇ ಮತ್ತು ಕೊನೆಯ ಪಂದ್ಯವನ್ನು ಆಡಲಿದೆ.

<>><><*><><<>

೨೪ ನೇ ರಾಷ್ಟ್ರೀಯ ಪ್ಯಾರಾ-ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ೨೦೨೬ ನಿನ್ನೆ ಭುವನೇಶ್ವರದ ಐಕಾನಿಕ್ ಕಳಿಂಗ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡಿತು. ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮತ್ತು ರಾಜ್ಯದ ಕ್ರೀಡಾ ಮತ್ತು ಯುವ ಸೇವೆಗಳ ಸಚಿವ ಸೂರ್ಯಬಂಶಿ ಸೂರಜ್ ಅವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

<>><><*><><<>

ರುವಾಂಡಾದ ಫ್ಯಾನಿ ಉಟಗುಶಿಮನಿಂಡೆ ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಇತಿಹಾಸದಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರುವಾಂಡಾದ ಆರಂಭಿಕ ಆಟಗಾರ್ತಿ ಉಟಗುಶಿಮನಿಂಡೆ ನೈಜೀರಿಯಾ ಇನ್ವಿಟೇಷನಲ್ ಟಿ೨೦ ಪಂದ್ಯಾವಳಿಯಲ್ಲಿ ಘಾನಾ ವಿರುದ್ಧ ಕೇವಲ ೬೫ ಎಸೆತಗಳಲ್ಲಿ ಅಜೇಯ ೧೧೧ ರನ್ ಗಳಿಸಿದರು.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರು ನಿನ್ನೆ ಇರಾನಿನ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಚಿವರು, ಸಂಘರ್ಷಕ್ಕೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳು ಮತ್ತು ಅದರ ಪರಿಣಾಮಗಳ ಕುರಿತು ಸಂಭಾಷಣೆ ನಡೆಸಲಾಯಿತು ಎಂದು ಮಾಹಿತಿ ನೀಡಿದ್ದಾರೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಗಂಟೆಗೆ ><><<>